ವಿಷಯ :- ಮಾಸೂರ್ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 985 (214)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೆಕೆರೂರು ತಾಲ್ಲೂಕು ಮಾಸುರ ಪ್ರಾಥಮಿಕ ಆರೋಗ್ಯ ಕೇಂದ್ರವು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಿದ್ದು, ಇನ್ನೂವರೆಗೆ ಯಾವುದೇ ಕೆಲಸ ಆಗಿಲ್ಲದಿರಲು ಕಾರಣಗಳೇನು?

ಆ) ಮೇಲ್ದರ್ಜೆಗೇರಿದ ಕಾರ್ಯ ಯಾವಾಗ ಕಾರ್ಯರೂಪಗೊಳ್ಳುವುದು?

ಶ್ರೀ ಡಾ : ಹೆಚ್. ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) 1996-97 ನೇ ಸಾಲಿಗಾಗಿ ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡಗಳ ಸಲುವಾಗಿ 10.00 ಲಕ್ಷ ರೂ. ಮಂಜೂರಾಗಿದ್ದು ಆದನ್ನು ಪ್ರಗತಿಯಲ್ಲಿರುವ ಕಲಘಟಗಿಯ ಕಟ್ಟಡಕ್ಕಾಗಿ ನೀಡಿರುವುದರಿಂದ ಮಸೂರದಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಅನುದಾನ ಲಭ್ಯವಾಗಿಲ್ಲ ಇರುವುದರಿಂದ ಕಟ್ಟಡವನ್ನು ಪ್ರಾರಂಭಿಸಿರುವುದಿಲ್ಲ.

ಆ) ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿಕೊಂಡು ಆದ್ಯತೆಯ ಮೇಲೆ ಕಟ್ಟಡದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ :- ರಾಜ್ಯದ ತಾಲ್ಲೂಕ್ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲ್ಲಿ ಕ್ಷ-ಕಿರಣ ಯಂತ್ರಗಳ ಅಳವಡಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 186 (140)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. 1995-96 ನೇ ಸಾಲಿಗೆ ತಾಲ್ಲೂಕು ಕೇಂದ್ರ ಆಸ್ಪತ್ರೆಗಳಿಗೆ ಕ್ಷ-ಕಿರಣ ಯಂತ್ರಗಳನ್ನು ಅಳವಡಿಸಲು ಜಿಲ್ಲಾವಾರು ಎಷ್ಟು ಹಣ ನಿಗದಿ ಮಾಡಲಾಗಿತ್ತು?

2. 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆ ಆದ 8.00 ಲಕ್ಷ ರೂ.ಗಳಲ್ಲಿ ಕ್ಷ-ಕಿರಣ ಯಂತ್ರ ಖರೀದಿಸಿಲ್ಲದಿರುವುದಕ್ಕೆ ಕಾರಣಗಳೇನು?

3. 1994-95 ನೇ ಸಾಲಿನಲ್ಲಿಯೂ ಸಹ ಈ ಬಿಡುಗಡೆಯಾದ ರೂ. 8.00 ಲಕ್ಷ ರೂಪಾಯಿಗಳನ್ನು ಉಪಯೋಗಿಸಲಾಗಿಲ್ಲ ಎಂಬುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಹೊಣೆಗಾರರು ಯಾರು? ಹಾಗೂ ಇವರ ಮೇಲೆ ಕೈಗೊಂಡಿರುವ ಕ್ರಮವೇನು?